ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,ರವರ ನ್ಯಾಯಾಲಯ, ಕಡೂರು

ಸಿ.ಸಿ.ನಂ.1492/2016

ದಿನಾಂಕ:29-04-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಿ.ಡಬ್ಲ್ಯು:1 ಸಿ.ಡಬ್ಲ್ಯು:2

ಸಾಕ್ಷಿಯ ಹೆಸರು : ಹೇಮಕಾಂತ್
ತಂದೆಯ ಹೆಸರು : ರಾಜಪ್ಪ
ವಯಸ್ಸು : 58 ವರ್ಷ
ಉದ್ಯೋಗ : ವ್ಯಾಪಾರ
ವಾಸ : ಕಡೂರು

**ಮುಖ್ಯ ವಿಚಾರಣೆ: ಮಾನ್ಯ ಸಸಅ ಅವರಿಂದ:**

ಸಾಕ್ಷಿ ಒಂದು ದಾಖಲೆ ಮೇಲೆ ತಮ್ಮ ಸಹಿ ನೋಡಿ ಗುರುತಿಸಿದ್ದು, ಸದರಿ ದಾಖಲೆ ಮಹಜರ್ ಆಗಿದ್ದು, ಅದನ್ನು ನಿಪಿ-1 ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸುಮಾರು 4 ವರ್ಷಗಳ ಹಿಂದೆ ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ರವಿ ಕಿರಣ್ ರೆಸಿಡೆನ್ಸಿಗೆ ಪೋಲೀಸರು ನನ್ನನ್ನು ಮಹಜರ್ ಸಾಕ್ಷಿಯಾಗಿ ಬರಮಾಡಿಕೊಂಡಿರುತ್ತಾರೆ. ಕೃತ್ಯ ನಡೆದ ಸ್ಥಳವನ್ನು ಪೋಲೀಸರಿಗೆ ಚಾಸಾ-1 ರವರು ತೋರಿಸಿರುತ್ತ್ರೆ. ನಿಪಿ-1 ಮಹಜರ್ ಕಾಲಕ್ಕೆ ಚಾಸಾ-3 ರವರು ನನ್ನೊಂದಿಗೆ ಇದ್ದರು. ಆ ಸಮಯದಲ್ಲಿ ಪೋಲೀಸರು ಛಾಯಾಚಿತ್ರಗಳನ್ನು ತೆಗೆದಿದ್ದು, ಸದರಿ ಛಾಯಾಚಿತ್ರಗಳನ್ನು ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು. ನಿಪಿ-1 ನ್ನು ನನ್ನ ಸಮಕ್ಷಮ ಬರೆಯಲಾಗಿದೆ.

**ಪಾಟೀ ಸವಾಲು: ಶ್ರೀ ಜಿ.ಎನ್.ವಿ. 1,3 ಮತ್ತು 4 ನೇ ಆರೋಪಿತರ ಪರ ವಕೀಲರಿಂದ್ಲ**

ಮಹಜರ್ ಸಾಕ್ಷಿಯಾಗಲು ಪೋಲೀಸರು ನನಗೆ ಲಿಖಿತವಾಗಿ ಮಾಹಿತಿ ನೀಡಿರುವುದಿಲ್ಲ. ನಿಪಿ-1 ನ್ನು ಯಾರು ಬರೆದರು ಎಂದು ನನಗೆ ಖುದ್ದು ಮಾಹಿತಿ ಇಲ್ಲ ಅಂದರೆ ಸರಿ. ನಿಪಿ-1 ರ ಬಗ್ಗೆ ನನಗೆ ನಿಖರ ಮಾಹಿತಿ ಇಲ್ಲ ಅಂದರೆ ಸರಿ. ನಿಪಿ-2 ಮತ್ತು 3 ನ್ನು ಯಾವ ವಿಚಾರಕ್ಕಾಗಿ ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ. ನಿಪಿ-1 ನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಬರೆಯಲಾಗಿದೆ ಎಂಬುದು ನನಗೆ ಗೊತ್ತಿಲ್ಲ ಅಂದರೆ ಸರಿ. ನಿಪಿ-1 ಕ್ಕೆ ಮೊದಲು ಯಾರು ಸಹಿ ಮಾಡಿದ್ದಾರೆ ಎಂದು ಹೇಳಲಾಗುವುದಿಲ್ಲ ಅಂದರೆ ಸರಿ. ಚಾಸಾ-1 ರವರ ಮಳಿಗೆಯಲ್ಲಿ ನಾನು ಟೀ ಅಂಗಡಿ ಇಟ್ಟುಕೊಂಡಿದ್ದೇನೆ ಅಂದರೆ ಸರಿ, ಆದ್ದರಿಂದ ಚಾಸಾ-1 ರವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**1,3 ಮತ್ತು 4 ನೇ ಆರೋಪಿತರ ಪರ ಪಾಟೀ ಸವಾಲನ್ನೇ ಉಳಿದ ಆರೋಪಿತರುಗಳಿಗೆ ಅಳವಡಿಸಿಕೊಳ್ಳಲಾಗಿದೆ.**

**ಮರು ವಿಚಾರಣೆ: ಇರುವುದಿಲ್ಲ.**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

(ಸಿ.ಎನ್.ಚಂದನ್)
ಪ್ರ:ಪ್ರ:ದ:ನ್ಯಾ:ದಂ.,ರವರು, ಕಡೂರು.